KARN010004662025

M H ANNAYYANAVAR

Digitally signed by M H ANNAYYANAVAR
Date: 2026.05.02 17:43:54 +0530

Presented on : 04-03-2025
Registered on: 04-03-2025
Decided on : 02-05-2026
Duration : 01 year, 01 months, 29 days

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.**

**:ಉಪಸ್ಥಿತರು:**

ಶ್ರೀಯುತ ಎಂ.ಹೆಚ್. ಅಣ್ಣಯ್ಯನವರ, ಬಿಕಾಂ.ಎಲ್.ಎಲ್.ಬಿ. (ವಿಶೇಷ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.

**ದಿನಾಂಕ 2 ನೇ ಮೇ ಮಾಹೆ 2026**

**ಪಿ ಅಂಡ್ ಎಸ್.ಸಿ. ಸಂಖ್ಯೆ.15/2025**

ಅರ್ಜಿದಾರರು :

1. ಶ್ರೀ ರಾಜಣ್ಣ,
ಬಿನ್ ಲೇಟ್ ಗಂಗರಂಗಯ್ಯ,
ವಯಸ್ಸು 67 ವರ್ಷ.

2. ಶ್ರೀಮತಿ ಪ್ರಭಾವತಿ,
ಬಿನ್ ಲೇಟ್ ಗಂಗರಂಗಯ್ಯ,
ವಯಸ್ಸು 49 ವರ್ಷ.

ಇಬ್ಬರ ವಾಸಃ ಕನಕೇನಹಳ್ಳಿ ಗ್ರಾಮ,
ಎಣೇಗೆರೆ ಪೋಸ್ಟ್, ಸೋಲೂರು ಹೋಬಳಿ,
ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ.

**(ಶ್ರೀ ಹೆಚ್.ಟಿ.ನಾಗರಾಜು., ವಕೀಲರು)**

**-ವಿರುದ್ಧ-**

ಎದುರುದಾರರು : ಯಾರೂ ಇಲ್ಲಾ

*****

<u>ಭಾರತೀಯ ಉತ್ತರ ಜೀವಿ ಕಾನೂನು ಕಲಂ **276** ರ ಅಡಿ</u>
<u>ಅರ್ಜಿಯ ಮೇಲೆ ಆದೇಶ</u>

ಅರ್ಜಿದಾರರು ಭಾರತೀಯ ಉತ್ತರ ಜೀವಿ ಕಾನೂನು 276 ಅಡಿಯಲ್ಲಿ ಅರ್ಜಿ ಸಲ್ಲಿಸಿ, ಅರ್ಜಿದಾರರರಿಗೆ ಮೃತ ಚಿಕ್ಕಮ್ಮ ಕೋಂ ಲೇಟ್ ಗಂಗರಂಗಯ್ಯ ಇವರು ದಿನಾಂಕಃ 19-03-1999 ರಂದು ಮರಣ ಶಾಸನ ಮಾಡಿದ್ದು, ಆ ಪ್ರಕಾರ ಅರ್ಜಿದಾರರಿಗೆ ಮರಣ ಶಾಸನದ ಪ್ರಮಾಣಿತ ಪ್ರತಿ (probate) ನೀಡುವ ಕುರಿತು ಅರ್ಜಿ ದಾಖಲು ಮಾಡಿದ್ದಾರೆ.

**2.** <u>ಅರ್ಜಿಯ ಸಂಕ್ಷಿಪ್ತ ಸಾರಾಂಶ**:-**</u> ಅನುಸೂಚಿ ಆಸ್ತಿ ಅರ್ಜಿದಾರರ ತಾಯಿ ಮೃತ ಚಿಕ್ಕಮ್ಮ ಕೋಂ ಲೇಟ್ ಗಂಗರಂಗಯ್ಯ ಇವರಿಗೆ ಸೇರಿದಂತ ಸ್ವತ್ತುಗಳಾಗಿದ್ದು, ಅವರೇ ಆಸ್ತಿಯ ಮಾಲೀಕರು ಸ್ವಾಧೀನವನ್ನು ಹೊಂದಿದ್ದು, ನಂತರ ಮೃತ ಚಿಕ್ಕಮ್ಮ ಕೋಂ ಲೇಟ್ ಗಂಗರಂಗಯ್ಯ ಇವರು ತಮ್ಮ ಜೀವಿತ ಅವಧಿಯಲ್ಲಿ ತನ್ನ ಮಕ್ಕಳಾದ ಅರ್ಜಿದಾರರಿಗೆ ದಿನಾಂಕಃ19-03-1999 ರಂದು ಮರಣ ಶಾಸನ ಮಾಡಿ ನಂತರ ದಿನಾಂಕಃ13-4-1999 ರಂದು ಮೃತಪಟ್ಟಿದ್ದು, ಸದರಿ ಮರಣ ಶಾಸನದ ಆಧಾರದ ಮೇಲೆ ಅನುಸೂಚಿ ಆಸ್ತಿ ಖಾತೆ ಬದಲಾವಣೆ ಮಾಡಲು ಸಂಬಂಧಪಟ್ಟಂತ ಕಂದಾಯ ಅಧಿಕಾರಿಗಳಲ್ಲಿ ವಿನಂತಿಸಿಕೊಂಡಾಗ ಸದರಿ ಅಧಿಕಾರಿಗಳು ನ್ಯಾಯಾಲಯದಿಂದ ಪ್ರೊಬೇಟ್ ಆದೇಶ ಪಡೆದುಕೊಂಡು ಬರಬೇಕು ಅಂತ ಹೇಳಿರುವುದರಿಂದ ಈ ಅರ್ಜಿ ದಾಖಲು ಮಾಡಿರುತ್ತಾರೆ.

**3.** ಅರ್ಜಿದಾರರನ್ನು ಹೊರತುಪಡಿಸಿ ಬೇರೆ ಯಾರದರೂ ತಕರಾರು ಇದ್ದಲ್ಲಿ ಮಾನ್ಯ ನ್ಯಾಯಾಲಯಕ್ಕೆ ಹಾಜರಾಗಿ ತಕರಾರು ಸಲ್ಲಿಸಬಹುದು ಎಂಬುದರ ಬಗ್ಗೆ ದಿನಾಂಕಃ15-07-

25 ರಂದು ಸುವರ್ಣ ಟೈಮ್ಸ್ ಆಫ್ ಕರ್ನಾಟಕ ದಿನಪತ್ರಿಕೆಯಲ್ಲಿ ಪ್ರಕಟಣೆ ಮಾಡಿದ್ದು, ಯಾರೂ ಸಹ ನ್ಯಾಯಾಲಯಕ್ಕೆ ಹಾಜರಾಗಿ ತಕರಾರು ಸಲ್ಲಿಸಿರುವುದಿಲ್ಲ.

**4.** ನಂತರ ಅರ್ಜಿಯಲ್ಲಿರುವಂತಹ ವಿಷಯಗಳನ್ನು ರುಜುವಾತುಪಡಿಸಲು ಅರ್ಜಿದಾರರು ಮಾನ್ಯ ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷಿ ನಂ.1 ಮತ್ತು 2 ಎಂದು ವಿಚಾರಣೆ ಮಾಡಿ, ನಿಪಿ.1 ರಿಂದ ನಿಪಿ.6 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ನಂತರ ಅರ್ಜಿದಾರರ ಪರವಾಗಿ ಸಾಕ್ಷಿ ನಂ.3 ನಾರಾಯಣ, ಪ್ರಾ.ಸಾ.4 ಚಂದ್ರಶೇಖರ್ ಇವರು ನ್ಯಾಯಾಲಯಕ್ಕೆ ಹಾಜರಾಗಿ ಅನುಪ್ರಮಾಣಿಕ ಸಾಕ್ಷಿ ಎಂದು ವಿಚಾರಣೆ ಮಾಡಿರುತ್ತಾರೆ.

**5.** ಅರ್ಜಿ, ದಾಖಲೆ ಪರಿಶೀಲಿಸಲಾಗಿ ಮಾನ್ಯ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಚರ್ಚೆಗೆ ಬಂದಿರುತ್ತವೆ.

ಅಂಶ 1 ಃ- ಮೃತ ಚಿಕ್ಕಮ್ಮ ಕೋಂ ಲೇಟ್ ಗಂಗರಂಗಯ್ಯ ಇವರು ದಿನಾಂಕಃ19-03-1999 ರಂದು ಕೊನೆಯ ಮರಣ ಶಾಸನ ಮಾಡಿರುತ್ತಾರೆಂದು ಅರ್ಜಿದಾರರು ರುಜುವಾತು ಪಡಿಸುವರೆ ?

ಅಂಶ 2 ಃ- ಅರ್ಜಿದಾರರು ಅರ್ಜಿಯಲ್ಲಿ ವಿನಂತಿಸಿದ ಪ್ರಕಾರ ಪ್ರೊಬೇಟ ಆದೇಶ ಪಡೆಯಲು ಅರ್ಹರಿರುತ್ತಾರೆ ಅಂತ ರುಜುವಾತು ಪಡಿಸುವರೆ ?

ಅಂಶ 3 ಃ- ಯಾವ ಆದೇಶ ?

**6.** ಈ ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತೆ ಇರುತ್ತದೆ.

| | | |
|---|---|---|
| ಅಂಶ ನಂ.1 | : | ಸಕಾರಾತ್ಮಕ |
| ಅಂಶ ನಂ.2 | : | ಸಕಾರಾತ್ಮಕ |
| ಅಂಶ ನಂ.3 | : | ಅಂತಿಮ ಆದೇಶದಂತೆ |

## -: ಕಾರಣಗಳು :-

**7.** <u>ಅಂಶ ನಂ.**1** ಮತ್ತು **2:-**</u> ನ್ಯಾಯಾಲಯದ ಅನುಕೂಲಕ್ಕೋಸ್ಕರವಾಗಿ ಅಂಶ 1 ಮತ್ತು 2 ನ್ನು ಏಕಕಾಲಕ್ಕೆ ತೆಗೆದುಕೊಳ್ಳಲಾಗಿದೆ.

**8.** ಭಾರತೀಯ ಉತ್ತರ ಜೀವಿ ಕಾನೂನು 1925 ಕಲಂ 276 ರ ಅಡಿ ಆದೇಶ ಮಾಡುವುದಕ್ಕಿಂತ ಪೂರ್ವದಲ್ಲಿ ಈ ಕೆಳಕಂಡ ಅಂಶಗಳನ್ನು ಅರ್ಜಿದಾರರು ರುಜುವಾತುಪಡಿಸಬೇಕಾಗುತ್ತದೆ.

ಎ) ಮರಣ ಶಾಸನ ಬರೆದ ವ್ಯಕ್ತಿ ಯಾವ ದಿನಾಂಕದಂದು ಮರಣ ಹೊಂದಿದ್ದಾರೆಂಬ ಬಗ್ಗೆ,

ಬಿ) ಸದರಿ ಮರಣ ಶಾಸನ ಕೊನೆಯ ಮರಣ ಶಾಸನವಾಗಿರುತ್ತದೇಯೇ,

ಸಿ) ಸದರಿ ಅರ್ಜಿದಾರರಿಗೆ ಮರಣ ಶಾಸನವನ್ನು ಬರೆದು ಕೊಟ್ಟಿರುತ್ತಾರೆಯೇ,

ಡಿ) ಸದರಿ ಅನುಸೂಚಿ ಸ್ವತ್ತು ಅರ್ಜಿದಾರರಿಗೆ ಸೇರಿರುತ್ತದೆ ಅಂತಾ ಮರಣ ಶಾಸನದಲ್ಲಿ ಅರ್ಜಿದಾರರ ಹೆಸರು ನಮೂದಿಸಲಾಗಿರುತ್ತದೆಯೇ,

ಇ) ಮರಣ ಶಾಸನದಲ್ಲಿ ಅರ್ಜಿದಾರರ ಹೆಸರು ನಮೂದಿಸಲಾಗಿರುತ್ತದೆಯೇ,

ಎಫ್) ಸದರಿ ಸ್ವತ್ತು ನ್ಯಾಯಾಲಯದ ವ್ಯಾಪ್ತಿಗೆ ಬರುತ್ತದೆಯೇ,

ಜಿ) ಮರಣ ಶಾಸನದಲ್ಲಿರುವ ಸ್ವತ್ತು ಮರಣ ಶಾಸನ ಮಾಡುವಾಗ ಮೃತರ ಹೆಸರಿನಲ್ಲಿರುತ್ತವೆಯೇ,

**9.** ಸದರಿ ಅನುಸೂಚಿ ಆಸ್ತಿ ಮೃತ ಚಿಕ್ಕಮ್ಮ ಕೋಂ ಲೇಟ್ ಗಂಗರಂಗಯ್ಯ ಇವರು ಸದರಿ ಸ್ವತ್ತಿನ ಮಾಲೀಕರು ಇರುತ್ತಾರೆ ಅಂತ ತೋರಿಸಲು ನಿಪಿ.4 ಮತ್ತು 5 ಪಹಣಿ ಪತ್ರಿಕೆ ಹಾಜರು ಪಡಿಸಿರುತ್ತಾರೆ. ಸದರಿ ದಾಖಲೆಗಳಲ್ಲಿ ಅನುಸೂಚಿ ಆಸ್ತಿಗಳಲ್ಲಿ ಅರ್ಜಿದಾರರ ತಾಯಿ ಮೃತ ಚಿಕ್ಕಮ್ಮ ಕೋಂ ಲೇಟ್ ಗಂಗರಂಗಯ್ಯ ಇವರು ಮಾಲೀಕತ್ವ ಹೊಂದಿದ್ದ ಬಗ್ಗೆ ಸ್ಪಷ್ಟವಾಗಿ

ನಮೂದಿಸಿದ್ದು, ಸದರಿ ದಾಖಲೆಗಳ ಪ್ರಕಾರ ಮೃತ ಚಿಕ್ಕಮ್ಮ ಕೋಂ ಲೇಟ್ ಗಂಗರಂಗಯ್ಯ ಇವರು ಮರಣ ಹೊಂದುವ ಸಮಯದಲ್ಲಿ ಅನುಸೂಚಿ ಆಸ್ತಿಯ ಮಾಲೀಕರು ಇರುತ್ತಾರೆ ಅಂತ ಸದರಿ ದಾಖಲೆಗಳ ಮುಖಾಂತರ ರುಜುವಾತು ಪಡಿಸಿರುತ್ತಾರೆ.

**10.** ನಂತರ ಮೃತ ಚಿಕ್ಕಮ್ಮ ಕೋಂ ಲೇಟ್ ಗಂಗರಂಗಯ್ಯ ಇವರು ತಮ್ಮ ಜೀವಿತ ಅವಧಿಯಲ್ಲಿ ದಿನಾಂಕಃ19-03-1999 ರಂದು ನಿಪಿ.1 ಮರಣ ಶಾಸನ ಮಾಡಿ ದಿನಾಂಕಃ13-04-1999 ರಂದು ಮರಣ ಹೊಂದಿದ್ದರ ಬಗ್ಗೆ ನಿಪಿ.2 ಮರಣ ಪ್ರಮಾಣ ಪತ್ರ ಹಾಜರು ಪಡಿಸಿರುತ್ತಾರೆ ಹಾಗೂ ಮೃತ ಚಿಕ್ಕಮ್ಮ ಕೋಂ ಲೇಟ್ ಗಂಗರಂಗಯ್ಯ ಇವರ ಮಕ್ಕಳು ಇರುತ್ತಾರೆ ಎಂಬುದರ ಬಗ್ಗೆ ನಿಪಿ.3 ವಂಶವೃಕ್ಷ ಹಾಜರುಪಡಿಸಿರುತ್ತಾರೆ.

**11.** ನಿಪಿ.1 ಮರಣ ಶಾಸನ ಪತ್ರವನ್ನು ಅರ್ಜಿದಾರರು ರುಜುವಾತು ಪಡಿಸಬೇಕಾದಲ್ಲಿ ಈ ಕೆಳಕಂಡ ಅಂಶಗಳನ್ನು ರುಜುವಾತುಪಡಿಸಬೇಕಾಗುತ್ತದೆ ಎಂದು ಮಾನ್ಯ ಸರ್ವೋಚ್ಛ ನ್ಯಾಯಾಲಯ ಎ.ಐ.ಆರ್ 2006 ಎಸ್.ಸಿ 1975 ಗುರುದೇವ ಕಾರಾ ಮತ್ತು ಇತರರ ವಿರುದ್ಧ ಖಾನ ಮತ್ತು ಇತರರು ಈ ತೀರ್ಪಿನಲ್ಲಿ ತಿಳಿಸಿರುತ್ತಾರೆ.

1. ಸದರಿ ಮರಣ ಶಾಸನ ಲಿಖಿತ ರೂಪದಲ್ಲಿರಬೇಕು.
2. ಸದರಿ ಮರಣ ಶಾಸನ ಬರೆದುಕೊಟ್ಟಂತಹ ವ್ಯಕ್ತಿ ಸ್ವಪ್ರಜ್ಞೆ ಸ್ವಮನಸ್ಥಿತಿಯನ್ನು ಹೊಂದಿರಬೇಕು.
3. ಸದರಿ ಮರಣ ಶಾಸನಕ್ಕೆ ಅನುಪ್ರಮಾಣಿತ ಸಾಕ್ಷಿದಾರರ ರುಜು ಇರಬೇಕು.

4. ಸದರಿ ಮರಣ ಶಾಸನ ಬರೆದ ವ್ಯಕ್ತಿಯ ಮಾನಸಿಕ ಸ್ಥಿತಿ ಚೆನ್ನಾಗಿರಬೇಕು. ಯಾವ ಕಾರಣಕ್ಕೋಸ್ಕರವಾಗಿ ಮರಣ ಶಾಸನ ಬರೆಯಲಾಗಿದೆ ಅಂತ ಅವರಿಗೆ ತಿಳಿದಿರಬೇಕು.
5. ಸದರಿ ಮರಣ ಶಾಸನ ಓದಿ ಹೇಳಿದ ನಂತರ, ಅದು ಸರಿಯಾಗಿ ಇದೆ ಅಂತ ಒಪ್ಪಿ ಸಹಿ ಮಾಡಬೇಕು.
6. ಮರಣ ಶಾಸನವನ್ನು ಅನುಪ್ರಮಾಣಿತ ಸಾಕ್ಷಿಗಳ ಮುಖಾಂತರ ರುಜುವಾತು ಪಡಿಸಬೇಕು.

**12.** ಈ ಮೇಲ್ಕಂಡ ಅಂಶಗಳಿಗೆ ಸಂಬಂಧಿಸಿದಂತೆ ಭಾರತೀಯ ಸಾಕ್ಷಿ ಅಧಿನಿಯಮ ಕಲಂ.68 ಕಾನೂನನ್ನು ಪರಿಶೀಲಿಸಲಾಗಿ ಮರಣ ಶಾಸನವನ್ನು ರುಜುವಾತು ಪಡಿಸಬೇಕಾದಲ್ಲಿ ಕನಿಷ್ಠ ಒಬ್ಬ ಅನುಪ್ರಮಾಣಿಕ ಸಾಕ್ಷಿ ವಿಚಾರಣೆಯ ಮುಖಾಂತರ ಮರಣ ಶಾಸನ ರುಜುವಾತು ಪಡಿಸತಕ್ಕದ್ದು ಎಂದು ಸ್ಪಷ್ಟವಾದ ಕಾನೂನು ಇರುತ್ತದೆ. ಸದರಿ ಕಾನೂನಿನ ಪ್ರಕಾರ ಅರ್ಜಿದಾರ 1, 2 ಇವರು ಸಾಕ್ಷಿ.1, 2 ಅಂತ ವಿಚಾರಣೆ ಮಾಡಿದ್ದು, ಪ್ರಾ.ಸಾ.3 ನಾರಾಯಣ ಮತ್ತು ಪ್ರಾಸಾ.4 ಚಂದ್ರುಶೇಖರ್ ಇವರು ನಿಪಿ.1 ಮರಣ ಶಾಸನದ ಅನುಪ್ರಮಾಣಿಕ ಸಾಕ್ಷಿ ಆಗಿ ರುಜು ಮಾಡಿದ್ದು, ಇವರು ತಮ್ಮ ಸಾಕ್ಷಿಯಲ್ಲಿ ಮೃತ ಚಿಕ್ಕಮ್ಮ ಇವರು ತನ್ನ ಹೆಸರಿನಲ್ಲಿರುವ ಆಸ್ತಿಯನ್ನು ತನ್ನ ಮಕ್ಕಳಿಗೆ ಮರಣ ಶಾಸನ ಮಾಡುತ್ತೇನೆ ಅಂತ ಹೇಳಿದ್ದು, ಆ ಪ್ರಕಾರ ಮಾಗಡಿ ಉಪ ನೊಂದಣಿ ಕಛೇರಿಗೆ ಹೋಗಿದ್ದು, ಮರಣ ಶಾಸನ ಮಾಡಿ ಕೊಡುವ ಸಮಯದಲ್ಲಿ ಮೃತ ಚಿಕ್ಕಮ್ಮ ಕೋಂ ಲೇಟ್ ಗಂಗರಂಗಯ್ಯ ಇವರ ಆರೋಗ್ಯ ಮಾನಸಿಕವಾಗಿ ದೈಹಿಕವಾಗಿ ಚೆನ್ನಾಗಿದ್ದು, ಏನು ಮಾಡಿ ಕೊಡುತ್ತಿದ್ದೇನೆ ಅಂತ ಅರಿವಿತ್ತು, ಆ ಪ್ರಕಾರ ನಿಪಿ.1 ನೊಂದಾಯಿತ ಮರಣ ಶಾಸನಕ್ಕೆ ನಾವು ಅನುಪ್ರಮಾಣಿಕ ಸಾಕ್ಷಿಯಾಗಿ ರುಜು

ಮಾಡಿರುತ್ತೇವೆ ಅಂತ ಸಾಕ್ಷಿ ನುಡಿದಿರುತ್ತಾರೆ. ಆದ್ದರಿಂದ ಸದರಿ ನಿಪಿ.1 ಮರಣ ಶಾಸನವನ್ನು ಅನುಪ್ರಮಾಣಿಕ ಸಾಕ್ಷಿಗಳ ಮುಖಾಂತರ ಅರ್ಜಿದಾರರು ರುಜುವಾತು ಪಡಿಸಿರುತ್ತಾರೆ.

**13.** ಅರ್ಜಿದಾರರನ್ನು ಹೊರತು ಪಡಿಸಿ, ಬೇರೆ ಯಾರದಾದರೂ ತಕರಾರು ಇದ್ದಲ್ಲಿ ನ್ಯಾಯಾಲಯಕ್ಕೆ ಹಾಜರಾಗಿ ತಕರಾರು ಸಲ್ಲಿಸಬಹುದು ಎಂಬುದರ ಬಗ್ಗೆ ದಿನಾಂಕಃ15-07-2025 ರಂದು ಸುವರ್ಣ ಟೈಮ್ಸ್ ಆಫ್ ಕರ್ನಾಟಕ ನಿಪಿ.6 ದಿನಪತ್ರಿಕೆಯಲ್ಲಿ ಪ್ರಕಟಣೆ ಮಾಡಿದ್ದರೂ ಸಹಿತ ಯಾರೂ ಹಾಜರಾಗಿರುವುದಿಲ್ಲ. ಸದರಿ ಮರಣ ಶಾಸನ ಪ್ರಕಾರ ಖಾತೆ ಬದಲಾವಣೆ ಮಾಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ವಿನಂತಿಸಿದರೂ ಸಹಿತ ಖಾತೆ ಬದಲಾವಣೆ ಮಾಡಿಲ್ಲದೇ ಇರುವುದರಿಂದ ಅರ್ಜಿದಾರರು ಅರ್ಜಿಯಲ್ಲಿ ವಿನಂತಿಸಿದ ಪ್ರಕಾರ ಪ್ರೊಬೇಟ್ ಆದೇಶವನ್ನು ಪಡೆಯಲು ಅರ್ಹರಿರುತ್ತಾರೆ. ಆದ್ದರಿಂದ ಅಂಶ ಸಂಖ್ಯೆ **1** ಮತ್ತು **2** ನ್ನು ಸಕಾರಾತ್ಮಕವಾಗಿ ಉತ್ತರಿಸಲಾಯಿತು.

**14.** ಅಂಶ ಸಂಖ್ಯೆ.**3:-** ಅಂಶ ಸಂಖ್ಯೆ.1 ಮತ್ತು 2 ಕ್ಕೆ ನೀಡಿದ ಕಾರಣ ಹಾಗೂ ಉತ್ತರಗಳಿಗಾಗಿ ಈ ಕೆಳಗಿನಂತೆ:-

## ಆದೇಶ

ಅರ್ಜಿದಾರರು ಸಲ್ಲಿಸಿದ ಭಾರತೀಯ ಉತ್ತರಜೀವಿ ಕಾನೂನು ಕಲಂ 276 ರ ಅಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಲಾಗಿದೆ.

ದಿನಾಂಕಃ19-03-1999 ರಂದು ಮೃತ ಚಿಕ್ಕಮ್ಮ ಕೋಂ ಲೇಟ್ ಗಂಗರಂಗಯ್ಯ ಇವರು ಮಾಡಿದಂತಹ ಕೊನೆಯ ಮರಣ ಶಾಸನವಾಗಿದ್ದು, ಮರಣ ಶಾಸನದಲ್ಲಿ ನಮೂದಿಸಿದ ಅನುಸೂಚಿಯ ಆಸ್ತಿಗಳಿಗೆ ಸಂಬಂಧಪಟ್ಟಂತೆ, ಮರಣ ಶಾಸನದ ಪ್ರಮಾಣಿತ ಪ್ರತಿಯನ್ನು (probate) ಅರ್ಜಿದಾರರಿಂದ ಸಮರ್ಪಕವಾದಂತಹ ಶುಲ್ಕ ಪಡೆದ ನಂತರ ಅರ್ಜಿದಾರರಿಗೆ ಪ್ರೊಬೇಟನ್ನು ನೀಡುವಂತೆ ಆದೇಶಿಸಲಾಯಿತು.

ನಿಪಿ.1 ಮರಣ ಶಾಸನದ ಮೂಲ ಪ್ರತಿಯನ್ನು ಕಲಂ 294 ರ ಪ್ರಕಾರ ಕಡತದಲ್ಲಿಡಲು ಆದೇಶಿಸಲಾಯಿತು.

ನಿಪಿ.1 ಮರಣ ಶಾಸನವನ್ನು ಹೊರತುಪಡಿಸಿ, ಇನ್ನುಳಿದ ಮೂಲ ದಾಖಲಾತಿಗಳನ್ನು ಅರ್ಜಿದಾರರ ಕಡೆಯಿಂದ ಧೃಡೀಕೃತ ನಕಲನ್ನು ಪಡೆದುಕೊಂಡು ಅರ್ಜಿದಾರರಿಗೆ ವಾಪಸ್ಸು ಕೊಡಲು ಆದೇಶಿಸಲಾಗಿದೆ.

ಖರ್ಚಿನ ಮೇಲೆ ಯಾವುದೇ ಆದೇಶವಿಲ್ಲ.

*(ಈ ಆದೇಶದ ಉಕ್ತಲೇಖನವನ್ನು ಶೀಘ್ರಲಿಪಿಗಾರ್ತಿ ಗ್ರೇಡ್ -1 ರವರಿಗೆ ನೇರವಾಗಿ ಗಣಕ ಪರದೆಯ ಮೇಲೆ ನೀಡಿದ್ದು, ನಂತರ ಅವರು ಗಣಕೀಕರಿಸಿದ್ದನ್ನು ಓದಿ, ತಿದ್ದಿ ಇದೇ ದಿನಾಂಕ 2 ನೇ ಮೇ ಮಾಹೆ **2026** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು).*

(ಎಂ.ಹೆಚ್. ಅಣ್ಣಯ್ಯನವರ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ರಾಮನಗರ.

## -: ಅನುಬಂಧ :-

ಅರ್ಜಿದಾರರ ಪರವಾಗಿ ಮಾಡಿದ ಸಾಕ್ಷಿಗಳ ವಿವರಃ-

| | | |
|---|---|---|
| ಪ್ರಾಸಾ.1 | : | ರಾಜಣ್ಣ |
| ಪ್ರಾಸಾ.2 | : | ಶ್ರೀಮತಿ ಪ್ರಭಾವತಿ |
| ಪ್ರಾ.ಸಾ.3 | : | ನಾರಾಯಣ |
| ಪ್ರಾ.ಸಾ.4 | : | ಚಂದ್ರಶೇಖರ್ |

ಅರ್ಜಿದಾರರ ಪರವಾಗಿ ಗುರುತು ಮಾಡಿದ ದಾಖಲೆಗಳ ವಿವರಃ-

| | | |
|---|---|---|
| ನಿ.ಪಿ.1 | : | ದಿನಾಂಕಃ19-03-199 ರ ಮರಣ ಶಾಸನ ಪತ್ರ |
| ನಿಪಿ.1(ಎ) | : | ನಾರಾಯಣಪ್ಪ ರವರ ಸಹಿ |
| ನಿಪಿ.1(ಬಿ) | : | ಚಂದ್ರಶೇಖರ್.ಬಿ. ರವರ ಸಹಿ |
| ನಿ.ಪಿ.2 | : | ಚಿಕ್ಕಮ್ಮ ರವರ ಮರಣ ಪ್ರಮಾಣ ಪತ್ರ |

| | | |
|---|---|---|
| ನಿ.ಪಿ.3 | : | ವಂಶವೃಕ್ಷ |
| ನಿಪಿ.4, 5 | : | ಆರ್.ಟಿ.ಸಿ. |
| ನಿಪಿ.6 | : | ಪತ್ರಿಕಾ ಪ್ರಕಟಣೆ ದಿನಾಂಕಃ15-07-2025 |

ಎದುರುದಾರರ ಪರವಾಗಿ ಮಾಡಿದ ಸಾಕ್ಷಿಗಳ ವಿವರಃ-

------ಇಲ್ಲ------

ಎದುರುದಾರರ ಪರವಾಗಿ ಮಾಡಿದ ದಾಖಲೆಗಳ ವಿವರಃ-

------ಇಲ್ಲ------

(ಎಂ.ಹೆಚ್. ಅಣ್ಣಯ್ಯನವರ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ರಾಮನಗರ.